# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 502

ಸದಸ್ಯರ ಹೆಸರು : ಶ್ರೀ ಕೇಶವ ಪ್ರಸಾದ್ ಎಸ್. (ವಿಧಾನಸಭೆಯಿಂದ ಚುನಾಯಿತರಾದವರು)

ಉತ್ತರಿಸುವ ದಿನಾಂಕ : 08.12.2023

ಉತ್ತರಿಸುವವರು : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು.

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯದ ಗ್ರಾಮ ಪಂಚಾಯಿತಿ ವ್ಯಾಪ್ತಿಗೊಳಪಡುವ ಒಟ್ಟು ಆಸ್ತಿಗಳೆಷ್ಟು; (ಜಿಲ್ಲಾವಾರು ವಿವರ ನೀಡುವುದು) | ರಾಜ್ಯದ ಗ್ರಾಮ ಪಂಚಾಯಿತಿ ವ್ಯಾಪ್ತಿಗೊಳಪಡುವ ಒಟ್ಟು ಆಸ್ತಿಗಳ ಸಂಖ್ಯೆ:14086205.<br>ಜಿಲ್ಲಾವಾರು ವಿವರವನ್ನು ಅನುಬಂಧದಲ್ಲಿ ನೀಡಿದೆ. |
| (ಆ) | ಈ ಪೈಕಿ ತೆರಿಗೆ ವ್ಯಾಪ್ತಿಯಲ್ಲಿರುವ ಆಸ್ತಿಗಳೆಷ್ಟು; ತೆರಿಗೆ ವ್ಯಾಪ್ತಿಯಿಂದ ಹೊರಗಿರುವ ಆಸ್ತಿಗಳೆಷ್ಟು; ಆಸ್ತಿಗಳು ತೆರಿಗೆ ವ್ಯಾಪ್ತಿಯಿಂದ ಹೊರಗಿರುವ ಕಾರಣ ಸರ್ಕಾರಕ್ಕೆ ಆಗುತ್ತಿರುವ ನಷ್ಟ ಎಷ್ಟು; | ತೆರಿಗೆ ವ್ಯಾಪ್ತಿಯಲ್ಲಿರುವ ಆಸ್ತಿಗಳ ಸಂಖ್ಯೆ:13359211.<br>ತೆರಿಗೆ ವ್ಯಾಪ್ತಿಯಿಂದ ಹೊರಗಿರುವ ಆಸ್ತಿಗಳ ಸಂಖ್ಯೆ:726994.<br>ಜಿಲ್ಲಾವಾರು ವಿವರವನ್ನು ಅನುಬಂಧದಲ್ಲಿ ನೀಡಿದೆ.<br>ಆಸ್ತಿಗಳು ತೆರಿಗೆ ವ್ಯಾಪ್ತಿಯಿಂದ ಹೊರಗಿರುವ ಕಾರಣ ಸರ್ಕಾರಕ್ಕೆ ಆಗುತ್ತಿರುವ ನಷ್ಟವನ್ನು ತೆರಿಗೆ ವ್ಯಾಪ್ತಿಯಿಂದ ಹೊರಗಿರುವ ಆಸ್ತಿಗಳನ್ನು ತೆರಿಗೆ ವ್ಯಾಪ್ತಿಗೆ ಒಳಪಡಿಸಿ ತೆರಿಗೆ ಲೆಕ್ಕಾಚಾರ ಮಾಡಿ ನಂತರ ಕ್ರೋಢಿಕರಿಸಲಾಗುವುದು. |
| (ಇ) | ತೆರಿಗೆ ವ್ಯಾಪ್ತಿಯಿಂದ ಹೊರಗಿರುವ ಆಸ್ತಿಗಳನ್ನು ತೆರಿಗೆ ವ್ಯಾಪ್ತಿಗೆ ತರಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; | ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ಗ್ರಾಮ ಪಂಚಾಯತಿಗಳ ತೆರಿಗೆ, ದರ ಮತ್ತು ಫೀಜುಗಳು) ನಿಯಮಗಳು, 2021 ರ ನಿಯಮ, 17, 18 ಮತ್ತು 19 ರಲ್ಲಿ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 ರ ಪ್ರಕರಣ 199 ಕ್ಕನುಗುಣವಾಗಿ ಆಸ್ತಿಗಳನ್ನು ತೆರಿಗೆ ವ್ಯಾಪ್ತಿಗೆ ಒಳಪಡಿಸಲು ತೆರಿಗೆಗೆ ಗುರಿಯಾಗತಕ್ಕ ಎಲ್ಲಾ ಭೂಮಿ ಕಟ್ಟಡಗಳ ಸಮಗ್ರ ಸಮೀಕ್ಷೆಯನ್ನು ನಡೆಸಿ, ಆಸ್ತಿ ಮತ್ತು ಆಸ್ತಿ ತೆರಿಗೆ ನಮೂನೆಯಲ್ಲಿ ಆಸ್ತಿಯ ವಿವರಗಳನ್ನು ದಾಖಲಿಸಿ, ತೆರಿಗೆ ಲೆಕ್ಕಚಾರ ಮಾಡಿ ನಮೂನೆ-9 ಎ ವಹಿಯಲ್ಲಿ ನಮೂದಿಸಲು ತಿಳಿಸಲಾಗಿದೆ.<br>ರಾಜ್ಯದ ಎಲ್ಲಾ ಜಿಲ್ಲೆಗಳ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಕೃಷಿ ತೆರಿಗೆ |

| | | |
|---|---|---|
| | | ನಿರ್ಧರಣೆಗೆ ಒಳಪಟ್ಟಿರದ ಎಲ್ಲಾ ಭೂಮಿ ಮತ್ತು ಕಟ್ಟಡಗಳ ಮ್ಯಾನುಯಲ್ ಸಮೀಕ್ಷೆಯನ್ನು ನಡೆಸಿ ತೆರಿಗೆ ವ್ಯಾಪ್ತಿಗೆ ಒಳಪಡಿಸಲು ತಿಳಿಸಲಾಗಿದೆ. |
| (ಈ) | ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ತೆರಿಗೆ ಸಂಗ್ರಹ ಕಡಿಮೆ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಆಸ್ತಿ ತೆರಿಗೆ ಸಂಗ್ರಹ ಹೆಚ್ಚಿಸಿ, ಪಂಚಾಯ್ತಿ ಆಸ್ತಿಗಳ ರಕ್ಷಣೆ ಹಾಗೂ ನಿರ್ವಹಣೆ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? | ಗ್ರಾಮ ಪಂಚಾಯತಿಗಳಲ್ಲಿ ಸಂಪನ್ಮೂಲ ಕ್ರೋಢೀಕರಣಕ್ಕೆ ಸರ್ಕಾರ ಕೈಗೊಂಡಿರುವ ಕ್ರಮಗಳು ಈ ಕೆಳಕಂಡಂತಿವೆ.<br>1) ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ಗ್ರಾಮ ಪಂಚಾಯತಿಗಳ ತೆರಿಗೆ, ದರ ಮತ್ತು ಫೀಜುಗಳು) ನಿಯಮಗಳು, 2021 ಅನ್ನು ರೂಪಿಸಲಾಗಿದ್ದು, ಅದರಂತೆ ಗ್ರಾಮ ಪಂಚಾಯತಿಗಳು ತೆರಿಗೆ, ದರ ಮತ್ತು ಫೀಜುಗಳನ್ನು ವಿಧಿಸಲು ತಿಳಿಸಲಾಗಿದೆ.<br>2) ಗ್ರಾಮ ಪಂಚಾಯತಿ ವ್ಯಾಪ್ತಿಯ ಭೂಮಿ ಮತ್ತು ಕಟ್ಟಡಗಳ ಮೇಲೆ ತೆರಿಗೆ ಸಂಗ್ರಹಣೆ ಮಾಡಲು ಸರ್ಕಾರದಿಂದ ಮತ್ತು ಜಿಲ್ಲಾ ಪಂಚಾಯತಿಗಳಲ್ಲಿ ಪ್ರತಿ ಮಾಹೆ ಪ್ರಗತಿ ಪರಿಶೀಲನಾ ಸಭೆಗಳನ್ನು ಜರುಗಿಸಿ, ಗ್ರಾಮ ಪಂಚಾಯತಿವಾರು ಗುರಿ ನಿಗಧಿಪಡಿಸಿ, ವಸೂಲಿ ಮಾಡಲು ಕ್ರಮ ವಹಿಸಲಾಗುತ್ತಿದೆ.<br>3) ರಾಜ್ಯದ ಗ್ರಾಮ ಪಂಚಾಯತಿಗಳಲ್ಲಿ ಪಂಚತಂತ್ರ 2.0 ತಂತ್ರಾಂಶ ಅನುಷ್ಠಾನಗೊಳಿಸಲಾಗಿದ್ದು, ಸಂಗ್ರಹಣೆ ಮಾಡಲಾಗುವ ತೆರಿಗೆ, ಫೀಜು ಮತ್ತು ದರಗಳ ವಿವರಗಳನ್ನು ರಶೀದಿ ವೋಚರ್‌ಗಳನ್ನು ಸೃಜಿಸಿ ಅಳವಡಿಸಲು ಗ್ರಾಮ ಪಂಚಾಯತಿಗಳಿಗೆ ನಿರ್ದೇಶನ ನೀಡಲಾಗಿದೆ.<br>4) ಆಸ್ತಿಯ ಮಾಲೀಕರು ಕ್ಯಾಶ್, ಯು.ಪಿ.ಐ., ಪಿ.ಓ.ಎಸ್. ಡೆಬಿಟ್ ಕಾರ್ಡ್, ಕ್ರೆಡಿಟ್ ಕಾರ್ಡ್ , ಚೆಕ್ , ಡಿ.ಡಿ, ಇಂಟರ್‌ನೆಟ್ ಬ್ಯಾಂಕಿಗ್, ಫೋನ್ ಪೇ, ಗೂಗಲ್ ಪೇ, ಪೇಟಿಯಮ್, ಅಮೇಜನ್ ಪೇ, ಮೂಲಕ ತೆರಿಗೆ ಪಾವತಿಸಲು ಅವಕಾಶ ಕಲ್ಪಿಸಲಾಗಿದೆ. |

ಸಂಖ್ಯೆ: ಗ್ರಾಅಪ 606 ಗ್ರಾಪಂಅ 2023

(ಪ್ರಿಯಾಂಕ್ ಖರ್ಗೆ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ
ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು.

ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಕೇಶವ ಪ್ರಸಾದ್ ಎಸ್, ವಿಧಾನ ಪರಿಷತ್ ಸದಸ್ಯರು, (ವಿಧಾನಸಭೆಯಿಂದ ಚುನಾಯಿತರಾದವರು) ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:431 (502) ಕ್ಕೆ ಉತ್ತರ

ದಿನಾಂಕ:30.11.2023 ರ ಅಂತ್ಯಕ್ಕೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಆಸ್ತಿಗಳ ವಿವರ (ಜಿಲ್ಲಾ ಪಂಚಾಯತ್ ಳಿಂದ ಸ್ವೀಕೃತವಾದ ವರದಿಯಂತೆ)

| ಕ್ರ. ಸಂ. | ಜಿಲ್ಲೆಯ ಹೆಸರು | ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿರುವ ಒಟ್ಟು ಆಸ್ತಿಗಳ ಸಂಖ್ಯೆ | ತೆರಿಗೆ ವ್ಯಾಪ್ತಿಗೆ ಒಳಪಡುವ ಆಸ್ತಿಗಳ ಸಂಖ್ಯೆ | ತೆರಿಗೆ ವ್ಯಾಪ್ತಿಯಿಂದ ಹೊರಗಿರುವ ಆಸ್ತಿಗಳ ಸಂಖ್ಯೆ | ತೆರಿಗೆ ವ್ಯಾಪ್ತಿಯಿಂದ ಹೊರಗಿರಲು ಕಾರಣ |
|---|---|---|---|---|---|
| 1 | ಬಾಗಲಕೋಟೆ | 471341 | 418553 | 52788 | ಸರ್ಕಾರಿ ಆಸ್ತಿಗಳು ಹಾಗೂ ದೇವಾಸ್ಥಾನಗಳು, ತೋಟದ ಮನೆಗಳು, ಅರಣ್ಯ ಪ್ರದೇಶಗಳಲ್ಲಿ ವಾಸವಿರುವ ಆಸ್ತಿಗಳು |
| 2 | ಬಳ್ಳಾರಿ | 268828 | 256992 | 11836 | ಹೊಸದಾಗಿ ಸರ್ವೆ ನಂಬರ್ ನಲ್ಲಿ ಮನೆಗಳು ನಿರ್ಮಿಸಿಕೊಂಡಿರುತ್ತಾರೆ. ಮತ್ತು ಅಂಗನವಾಡಿ, ಶಾಲೆಗಳು, ದೇವಸ್ಥಾನಗಳಿಗೆ ತೆರಿಗೆ ವಿಧಿಸಿರುವುದಿಲ್ಲ. ಹಾಗೂ ಹೊಸದಾಗಿ ಸಮೀಕ್ಷೆ ಮಾಡಲಾದ ಆಸ್ತಿಗಳು. |
| 3 | ಬೆಳಗಾವಿ | 1107754 | 1073934 | 33820 | ಗ್ರಾಮ ಠಾಣಾದಿಂದ ಹೊರಗುಳಿದ ಆಸ್ತಿಗಳು ಸರ್ಕಾರಿ ಆಸ್ತಿ, ದೇವಸ್ಥಾನಗಳು |
| 4 | ಬೆಂಗಳೂರು ನಗರ | 824902 | 803535 | 21367 | ಬೆಂಗಳೂರು ನಗರ ಜಿಲ್ಲೆಯ 05 ತಾಲ್ಲೂಕು ಪಂಚಾಯತಿ ವ್ಯಾಪ್ತಿಗಳಲ್ಲಿನ 04 ತಾಲ್ಲೂಕುಗಳ ಗ್ರಾಮ ಪಂಚಾಯತಿಗಳಲ್ಲಿ ಸರ್ವೆ ಕಾರ್ಯ ಪ್ರಗತಿಯಲ್ಲಿರುವುದರಿಂದ ಸರ್ವೆ ಕಾರ್ಯ ಮುಗಿದ ನಂತರ ನಿಖರವಾದ ಮಾಹಿತಿ ಲಭ್ಯವಾಗುತ್ತದೆ. ಈ ಪೈಕಿ ಆನೇಕಲ್ ತಾಲ್ಲೂಕಿನ ಒಟ್ಟು ಹೊರಗಿರುವ ಆಸ್ತಿಗಳ ಸಂಖ್ಯೆ 21367 ಇರುತ್ತದೆ. ಹಾಗೂ ಪಂಚತಂತ್ರ ತಂತ್ರಾಂಶದಲ್ಲಿ ಅವಕಾಶ ಕಲ್ಪಿಸಿರುವುದಿಲ್ಲ. |
| 5 | ಬೆಂಗಳೂರು ಗ್ರಾ | 373960 | 369713 | 4247 | ಸಮುದಾಯ ಭವನ, ದೇವಸ್ಥಾನಗಳು ಮತ್ತು ಸರ್ಕಾರಿ ಶಿಕ್ಷಣ ಸಂಸ್ಥೆಗಳು ಮತ್ತು ಸರ್ಕಾರಿ ಆಸ್ತಿಗಳು ತೆರಿಗೆಯಿಂದ ಹೊರಗೆ ಇರುತ್ತದೆ. |
| 6 | ಬೀದರ್ | 345600 | 345600 | 0 | - |
| 7 | ಚಾಮರಾಜನಗರ | 345642 | 276514 | 69128 | ಕೆಲವು ಆಸ್ತಿಗಳು ರೆವಿನ್ಯೂ ಜಾಗದಲ್ಲಿದ್ದು ಗ್ರಾಮ ಠಾಣಾ ವ್ಯಾಪ್ತಿಗೆ ಒಳಪಟ್ಟಿರುವುದಿಲ್ಲ. |
| 8 | ಚಿಕ್ಕಬಳ್ಳಾಪುರ | 457136 | 428067 | 29069 | ಸಮುದಾಯ ಭವನ, ದೇವಾಸ್ಥಾನಗಳು, ಶಾಲೆಗಳು ಮತ್ತು ಸರ್ಕಾರಿ ಆಸ್ತಿಗಳು ತೆರಿಗೆಯಿಂದ ಹೊರಗೆ ಇರುತ್ತವೆ. |

ನಿರ್ದೇಶಕರು (ಅಭಿವೃದ್ಧಿ)
ಕಂ.ಪಂ.ರಾಜ್ ಆಯುಕ್ತಾಲಯ

| | | | | | |
|---|---|---|---|---|---|
| 9 | ಚಿಕ್ಕಮಗಳೂರು | 356399 | 327475 | 28924 | ಆಸ್ತಿ ಸಮೀಕ್ಷೆ ಸಂದರ್ಭದಲ್ಲಿ ತೆರಿಗೆ ಒಳಪಡದ ಇರುವ ಸ್ವತ್ತುಗಳು ಕಂಡುಬಂದಿದ್ದು, ಇ-ಸ್ವತ್ತು ತಂತ್ರಾಂಶದ ಮೂಲಕ ಪಂಚತಂತ್ರ 2.0 ತಂತ್ರಾಂಶದಲ್ಲಿ ಸೇರ್ಪಡೆಗೊಳಿಸಲು ಬಾಕಿ ಇರುತ್ತವೆ. ಸ್ವಂತ ಹಿಡುವಳಿ ಜಮೀನು ಜಾಗ, ಸರ್ಕಾರಿ ಶಾಲೆ ರಸ್ತೆಗಳು, ತುರಾಮಂದೆ ಜಾಗದಲ್ಲಿ ಕಟ್ಟಿರುವ ಮನೆಗಳು, ಸರ್ಕಾರಿ ಶಾಲೆ, ಅಂಗನವಾಡಿ ಕಟ್ಟಡಗಳು, ದೇವಸ್ಥಾನ ಮತ್ತು ಕಛೇರಿ ಮತ್ತು ಕೆಲವು ಆಸ್ತಿಗಳು ಗ್ರಾಮ ಠಾಣಾ ವ್ಯಾಪ್ತಿಯಿಂದ ಹೊರಗಿರುವುದರಿಂದ ಮತ್ತು ಗ್ರಾಮ ಪಂಚಾಯತಿ, ಇತರೇ ಸರ್ಕಾರಿ ಆಸ್ತಿಗಳು ಮತ್ತು ಧಾರ್ಮಿಕ ಕಟ್ಟಡಗಳು. |
| 10 | ಚಿತ್ರದುರ್ಗ | 502399 | 464174 | 38225 | ಸದರಿ ಆಸ್ತಿಗಳು ಸ್ವಂತ ಸರ್ವೆ ನಂಬರ್‌ಗಳಲ್ಲಿ ಇರದೇ ಇರುವು ಕಾರಣ ಮತ್ತು ಕಂದಾಯ ಜಮೀನು ಮತ್ತು ಕಣಗಳಲ್ಲಿ ಮನೆಗಳನ್ನು ಕಟ್ಟಿಕೊಂಡಿರುತ್ತಾರೆ. |
| 11 | ದಕ್ಷಿಣ ಕನ್ನಡ | 472453 | 462482 | 9971 | ಸರ್ಕಾರಿ ಕಟ್ಟಡ, ಮಂದಿರಗಳು, ಧಾರ್ಮಿಕ ಕೇಂದ್ರಗಳು, ಇತರೆ |
| 12 | ದಾವಣಗೆರೆ | 346480 | 320760 | 25720 | ಸ್ವಂತ ಸರ್ವೆ ನಂಬರ್‌ನಲ್ಲಿರುವ ಕಾರಣ, ಗ್ರಾಮ ಠಾಣೆಗೆ ಸೇರಿರದ ಕಾರಣ, ರೆವಿನ್ಯೂ ಇಲಾಖೆಗೆ ಸೇರಿರುವ ಕಾರಣ |
| 13 | ಧಾರವಾಡ | 288559 | 287733 | 826 | ಸರ್ಕಾರಿ ಆಸ್ತಿಗಳು, ದೇವಾಸ್ಥಾನಗಳು, ಸಮುದಾಯ ಭವನಗಳು |
| 14 | ಗದಗ | 336789 | 336789 | 0 | ---- |
| 15 | ಹಾಸನ | 564479 | 540139 | 24340 | ಸರ್ಕಾರಿ ಆಸ್ತಿಗಳು, ಸಮುದಾಯ ಆಸ್ತಿಗಳು ಮತ್ತು ದೇವಸ್ಥಾನಗಳು ಹಾಗೂ ದಾಖಲೆಗಳಿಲ್ಲದಿರುವ ಆಸ್ತಿಗಳು |
| 16 | ಹಾವೇರಿ | 455948 | 451223 | 4725 | ಸರ್ಕಾರಿ ಆಸ್ತಿಗಳು, ಸಮುದಾಯ ಭವನ ಮತ್ತು ದೇವಸ್ಥಾನ, ಶಾಲೆಗಳು ಮತ್ತು ಸರ್ಕಾರಿ ಆಸ್ತಿಗಳು ತೆರಿಗೆಯಿಂದ ಹೊರಗೆ ಇರುತ್ತವೆ. |
| 17 | ಕಲಬುರಗಿ | 499181 | 471494 | 27687 | ಗ್ರಾಮ ಪಂಚಾಯತಿಯಲ್ಲಿ ಮ್ಯಾನ್ಯೂಯಲ್ ಸರ್ವೆ ಕಾರ್ಯ ನಡೆಸಿ ತೆರಿಗೆ ವ್ಯಾಪ್ತಿಗೆ ತರಲು ಕ್ರಮ ಕೈಗೊಳ್ಳುವ ಕಾರ್ಯ ಪ್ರಗತಿಯಲ್ಲಿದೆ. |
| 18 | ಕೊಡಗು | 119304 | 111448 | 7856 | ತಾಲ್ಲೂಕಿನ ಕಾರ್ಯನಿರ್ವಾಹಕ ಅಧಿಕಾರಿಗಳಿಂದ ಸ್ವೀಕೃತವಾದ ಕಾರಣಗಳನ್ನು ಪತ್ರದೊಂದಿಗೆ ಲಗತ್ತಿಸಿದೆ (ಕಾರಣಗಳನ್ನು ನಮೂದಿಸಿರುವುದಿಲ್ಲ) |
| 19 | ಕೋಲಾರ | 480149 | 448774 | 31375 | ಸರ್ಕಾರಿ ಆಸ್ತಿಗಳು, ಸರ್ವೆ ನಂಬರ್ ಗಳು ಮತ್ತು ಧಾರ್ಮಿಕ ಸಂಸ್ಥೆಗಳು |
| 20 | ಕೊಪ್ಪಳ | 353542 | 332172 | 21370 | ಜಮೀನುಗಳಲ್ಲಿ ಮನೆ ನಿರ್ಮಾಣಗೊಂಡಿದ್ದರಿಂದ, ಸರ್ವೆ ನಂಬರ್ ಜಮೀನಿನಲ್ಲಿ ಮನೆ ನಿರ್ಮಾಣ ಮಾಡಿಕೊಂಡಿರುವುದರಿಂದ ಮತ್ತು ಪಂಚತಂತ್ರ 2.0 ತಂತ್ರಾಂಶದಲ್ಲಿ ಆಸ್ತಿ ವಿವರಗಳು ಸೇರ್ಪಡೆಯಾಗುತ್ತಿಲ್ಲ. |
| 21 | ಮಂಡ್ಯ | 520856 | 505499 | 15357 | ಸರ್ಕಾರಿ ಆಸ್ತಿಗಳು ಹಾಗೂ ಸರ್ವೆ ನಂಬರ್ ಆಸ್ತಿಗಳಾಗಿರುವ ಕಾರಣ |
| 22 | ಮೈಸೂರು | 735539 | 639716 | 95823 | ಸರ್ಕಾರದ ಆಸ್ತಿಗಳು, ಸಮುದಾಯ ಆಸ್ತಿಗಳು ಮತ್ತು ದೇವಸ್ಥಾನಗಳು ಹಾಗೂ ದಾಖಲೆಗಳಿಲ್ಲದಿರುವ ಆಸ್ತಿಗಳು |
| 23 | ರಾಯಚೂರು | 397896 | 383711 | 14185 | ಸರ್ಕಾರಿ ಕಟ್ಟಡಗಳು, ದೇವಾಸ್ಥಾನಗಳು, ಮಂದಿರ, ಮಸೀದಿ ಮತ್ತು ಸಮುದಾಯ ಭವನಗಳು ಇತ್ಯಾದಿ |

| | | | | | |
|---|---|---|---|---|---|
| 24 | ರಾಮನಗರ | 336566 | 336313 | 253 | ಧಾರ್ಮಿಕ ಹಾಗೂ ಸರ್ಕಾರಿ ಆಸ್ತಿಗಳು (ಪಂಚತಂತ್ರ 2.0 ವರದಿಯಂತೆ) |
| 25 | ಶಿವಮೊಗ್ಗ | 394187 | 390939 | 3248 | ಕೆಲವು ಆಸ್ತಿಗಳು ಗ್ರಾಮ ಠಾಣಾ ವ್ಯಾಪ್ತಿಯಿಂದ ಹೊರಗಡೆ ಅರಣ್ಯ ಭೂಮಿ, ಕಂದಾಯ ಭೂಮಿ ಹಾಗೂ ಇನ್ನಿತರೆ ಖಾಸಗಿ ಸ್ಥಳದಲ್ಲಿದ್ದು ಅವುಗಳನ್ನು ತೆರಿಗೆ ವ್ಯಾಪ್ತಿಗೆ ಒಳಪಡಿಸಲು ಮ್ಯಾನ್ಯೂಯಲ್ ಸಮೀಕ್ಷೆ ನಡೆಸಲಾಗುತ್ತಿದೆ. |
| 26 | ತುಮಕೂರು | 949347 | 897952 | 51395 | ಸರ್ಕಾರಿ ಕಟ್ಟಡಗಳು, ಧಾರ್ಮಿಕ ಕಟ್ಟಡಗಳು ಹಾಗೂ ಸೂಕ್ತ ದಾಖಲೆಗಳಿಲ್ಲದ ಕಟ್ಟಡಗಳು |
| 27 | ಉಡುಪಿ | 396654 | 390881 | 5773 | ಪಂಚಾಯತ್ ರಾಜ್ ಕಾಯ್ದೆಯಂತೆ ಆಸ್ತಿ ತೆರಿಗೆ ವ್ಯಾಪ್ತಿಗೆ ಒಳಪಡದ ಸರ್ಕಾರಿ ಕಟ್ಟಡಗಳು, ಧಾರ್ಮಿಕ ಕೇಂದ್ರಗಳು, ಶೈಕ್ಷಣಿಕ ಸಂಸ್ಥೆಗಳು, ತೆರಿಗೆ ವಿನಾಯಿತಿ ಪಡೆದ ಕೃಷಿ ಉತ್ಪಾದನಾ ಘಟಕಗಳು ಇತ್ಯಾದಿಗಳು ನಿಯಮಾನುಸಾರ ತೆರಿಗೆ ವ್ಯಾಪ್ತಿಯಿಂದ ಹೊರಗುಳಿದಿರುತ್ತವೆ. |
| 28 | ಉತ್ತರ ಕನ್ನಡ | 352838 | 310949 | 41889 | ದೇವಸ್ಥಾನಗಳು, ಚರ್ಚುಗಳು, ಮಸಿದಿಗಳು ಹಾಗೂ ಇತರೇ ಸರ್ಕಾರಿ ಸ್ವಾಮ್ಯದ ಕಟ್ಟಡಗಳು, ರಾಷ್ಟ್ರೀಯ ಹೆದ್ದಾರಿ ಮತ್ತು ಅತಿವೃಷ್ಟಿ ಹಾಗೂ ಇತರೇ ಕಾರಣಗಳಿಂದ ನೆಲಸಮವಾಗಿರುವ ಆಸ್ತಿಗಳು/ಕಟ್ಟಡಗಳು, ಮನೆಗಳಿಗೆ ವಾರಸುದಾರರಿಲ್ಲದೇ ಇರುವ ಆಸ್ತಿಗಳು ಮತ್ತು duplicate village entry ಆಗಿರುವ ಆಸ್ತಿಗಳು. |
| 29 | ವಿಜಯಪುರ | 472932 | 462192 | 10740 | ಸಮುದಾಯ ಭವನ ಮತ್ತು ದೇವಸ್ಥಾನಗಳು ಮತ್ತು ಶಾಲೆಗಳು ಮತ್ತು ಸರ್ಕಾರಿ ಆಸ್ತಿಗಳು ತೆರಿಗೆಯಿಂದ ಹೊರಗೆ ಇರುತ್ತವೆ |
| 30 | ವಿಜಯನಗರ | 302623 | 279295 | 23328 | ಸದರಿ ಆಸ್ತಿಗಳು ಸ್ವಂತ ಸರ್ವೆ ನಂಬರ್‌ಗಳಲ್ಲಿ ಇರದೇ ಇರುವುದರಿಂದ ಹಾಗೂ ಕಂದಾಯ ಜಮೀನು ಮತ್ತು ಕಣಗಳಲ್ಲಿ ಮನೆಗಳನ್ನು ಕಟ್ಟಿಕೊಂಡಿರುತ್ತಾರೆ., |
| 31 | ಯಾದಗಿರಿ | 255922 | 234193 | 21729 | ಆಸ್ತಿಗಳ ಮ್ಯಾನ್ಯುಯಲ್ ಕಾರ್ಯ ಪ್ರಗತಿಯಲ್ಲಿದೆ. |
| | **ಒಟ್ಟು** | **14086205** | **13359211** | **726994** | |

ನಿರ್ದೇಶಕರು (ಅಭಿವೃದ್ಧಿ)

ಕಂ.ಪಂ.ರಾಜ್ ಆಯುಕ್ತಾಲಯ